Roll No. | | | | | | | |

**Series RKM** **Code No. 13**

- Please check that this question paper contains 5 printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains 10 questions.
- Please write down the serial number of the question before attempting it.

# KANNADA

# ಕನ್ನಡ

*Time allowed : 3 hours* | *Maximum Marks : 100*

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 100*

**ವಿಭಾಗ 1**

I 1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : 2

ಚಿತ್ತ, ವಚನ, ರಿಪು, ಉದಕ

2. ಈ ಸಂಧಿ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ : 2

ಬರಿಗನಸು, ಲೋಕಾಪವಾದ

3. ಈ ಪದಗಳ ತತ್ಸಮ/ತದ್ಭವ ರೂಪಗಳನ್ನು ಬರೆಯಿರಿ : 2

ವಿಷ, ಗೋಷ್ಠಿ, ಹರಣ, ಅಬ್ಧಿ

4. ಕೆಳಗಿನ ಪಡೆನುಡಿ/ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿ : 2

ಒಡಂಬಡು, ರಾಮಬಾಣ

5. ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : 2

ದಕ್ಷ, ಅಂತರಂಗ, ಪವಿತ್ರ, ಅಪರಾಧ

6. ಈ ಪದಗಳನ್ನು ವಿಗ್ರಹವಾಕ್ಯಗಳನ್ನಾಗಿ ಮಾಡಿ ಸಮಾಸದ ಹೆಸರನ್ನು ಬರೆಯಿರಿ : 2

ದೀನಾನಾಥರು, ಮುಂದಲೆ

7. ಈ ವಾಕ್ಯವನ್ನು ನಿಷೇಧಾತ್ಮಕ ವಾಕ್ಯವನ್ನಾಗಿ ಪರಿವರ್ತಿಸಿ : 1

"ಹಣವನ್ನು ಗಳಿಸುವುದೇ ಮನುಷ್ಯನ ಜೀವನದ ಪರಮ ಗುರಿ."

8. ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿವರಿಸಿ : 2

(ಅ) "ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದೀತೆ ?."

(ಆ) "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ."

II 9. ಅಂತರ ಶಾಲಾ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ ನಿಮ್ಮ ಗೆಳೆಯ/ಗೆಳತಿಗೆ ಅಭಿನಂದಿಸುತ್ತಾ ಪತ್ರವನ್ನು ಬರೆಯಿರಿ. 5

**ಅಥವಾ**

ಸಾರ್ವಜನಿಕ ಹಬ್ಬಗಳಲ್ಲಿ ಉಪಯೋಗಿಸುವ ಧ್ವನಿವರ್ಧಕದ ಹಾವಳಿಯನ್ನು ತಪ್ಪಿಸುವಂತೆ ಕೋರಿ ನಿಮ್ಮ ಪ್ರದೇಶದ ಆರಕ್ಷಕ ವೃತ್ತ ನಿರೀಕ್ಷಕರಿಗೆ ಪತ್ರವನ್ನು ಬರೆಯಿರಿ.

III 10. ದಿನಾಂಕ 1.3.2007 ರ *ಪ್ರಜಾವಾಣಿ* ದಿನಪತ್ರಿಕೆಯಲ್ಲಿನ ಜಾಹೀರಾತಿನ ಮೇರೆಗೆ ಆಡಳಿತ ಮಂಡಳಿ, 'ವಿಜಯ ಪ್ರೌಢಶಾಲೆ', ಹಾಸನ — ಇಲ್ಲಿಗೆ ಪ್ರಾಂಶುಪಾಲರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿ. 5

IV 11. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ : 10

(ಅ) ಪ್ರಜಾಪ್ರಭುತ್ವ

(ಆ) 'ನನ್ನ ಬಾಲ್ಯದ ಸವಿನೆನಪುಗಳು'

(ಇ) ಕರ್ನಾಟಕದ ಸಂಸ್ಕೃತಿ

V 12. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ಕಾದಂಬರಿಗಳ ಮೂಲಕ ಪ್ರಗತಿಪರ ಧೋರಣೆಯನ್ನು ಪ್ರತಿಪಾದಿಸಿದ ಬರಹಗಾರ್ತಿಯರಲ್ಲಿ ಪ್ರಮುಖರಾದ ತ್ರಿವೇಣಿಯವರು ಜನಿಸಿದ್ದು 1928 ನೇ ಇಸವಿಯಲ್ಲಿ. ಇವರ ನಿಜನಾಮಧೇಯ ಅನಸೂಯ. ಅನಂತರ 'ತ್ರಿವೇಣಿ' ಕಾವ್ಯನಾಮದಿಂದಲೇ ಪ್ರಸಿದ್ಧರಾದರು. ಇವರ ತಂದೆ ಕೃಷ್ಣಸ್ವಾಮಿ, ತಾಯಿ ತಂಗಮ್ಮ.

ಮನೋವಿಜ್ಞಾನವನ್ನು ಅಭ್ಯಸಿಸಿದ ತ್ರಿವೇಣಿಯವರು ತಮ್ಮ ಕತೆ, ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಸಮಸ್ಯೆಗಳನ್ನೇ ಹೆಚ್ಚಾಗಿ ಕಥಾವಸ್ತುವಾಗಿ ಬಳಸಿಕೊಂಡರು. ಅವುಗಳೆಂದರೆ *'ಬೆಕ್ಕಿನ ಕಣ್ಣು'*, *'ದೂರದ ಬೆಟ್ಟ'*, *'ಮುಚ್ಚಿದ ಬಾಗಿಲು'*, *'ಶರಪಂಜರ'*, ಇತ್ಯಾದಿ. ಇವರ ಪ್ರಮುಖ ಸಾಮಾಜಿಕ ಕಾದಂಬರಿಗಳೆಂದರೆ *'ವಸಂತಗಾನ'*, *'ಬೆಳ್ಳಿ ಮೋಡ'*, *'ಹಣ್ಣೆಲೆ ಚಿಗುರಿದಾಗ'*, *'ಸೋತು ಗೆದ್ದವಳು'*, ಇತ್ಯಾದಿ.

ಕೇವಲ ಒಂದು ದಶಕದ ಅವಧಿಯಲ್ಲಿ 20 ಕಾದಂಬರಿಗಳು ಹಾಗೂ 3 ಕಥಾಸಂಕಲನಗಳನ್ನು ರಚಿಸಿದ ಹೆಗ್ಗಳಿಕೆ ತ್ರಿವೇಣಿಯವರದ್ದು. ಬರೆದುದೆಲ್ಲವೂ ಜನಪ್ರಿಯತೆಯನ್ನು ತಂದುಕೊಟ್ಟ ಕೃತಿಗಳೇ. ಹೆಣ್ಣಿಗೆ ತನ್ನದೇ ಆದ ವ್ಯಕ್ತಿತ್ವವಿದೆ, ಹೆಣ್ಣು, ಗಂಡು ಸಮಾನರು ಎನ್ನುವಂಥ ಆಲೋಚನೆಗೆ ಮೊತ್ತಮೊದಲ ಬಾರಿಗೆ ಅಭಿವ್ಯಕ್ತಿ ದೊರೆತದ್ದು ಇವರ ಕಾದಂಬರಿಗಳಲ್ಲಿ. ಅಲ್ಲದೆ ಇಂದಿನ ಮಹಿಳಾ ಸಾಹಿತ್ಯದ ಸಮೃದ್ಧ ಬೆಳವಣಿಗೆಗೆ ಭದ್ರ ಬುನಾದಿಯನ್ನು ಹಾಕಿದವರೇ ಇವರು.

*ಪ್ರಶ್ನೆಗಳು :*

(ಅ) ತ್ರಿವೇಣಿಯವರ ನಿಜ ನಾಮಧೇಯ ಏನು ? 1

(ಆ) ಇವರ ಮನೋವೈಜ್ಞಾನಿಕ ಕಾದಂಬರಿಗಳಾವುವು ? 2

(ಇ) ತ್ರಿವೇಣಿಯವರು ಮಹಿಳೆಯರ ಉನ್ನತಿಗೆ ನೀಡಿದ ಕಾಣಿಕೆಯೇನು ? 3

(ಈ) 'ಬುನಾದಿಯನ್ನು' — ಈ ಪದದಲ್ಲಿರುವ ವಿಭಕ್ತಿಯನ್ನು ಹೆಸರಿಸಿ. 1

VI 13. ಈ ಲೇಖನವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ಪೆಪ್ಸಿ ಮತ್ತು ಕೋಕಕೋಲ ಕಂಪನಿಗಳ ಹನ್ನೊಂದು ತಂಪು ಪಾನೀಯಗಳಲ್ಲಿ ಆರೋಗ್ಯಕ್ಕೆ ಹಾನಿ ಉಂಟುಮಾಡುವ ಪ್ರಮಾಣದಲ್ಲಿ ರಾಸಾಯನಿಕ ಕೀಟನಾಶಕಗಳ ಅಂಶಗಳಿವೆ ಎಂದು ದೆಹಲಿಯ 'ಸಿ.ಎಸ್.ಇ.' ಎಂಬ ಸರ್ಕಾರೇತರ ಸಂಸ್ಥೆ ಹೇಳಿರುವುದು ಜನತೆಯಲ್ಲಿ ಆತಂಕವನ್ನು ಹುಟ್ಟಿಸಿದೆ. ಏಕೆಂದರೆ ಯುವಪೀಳಿಗೆಯಾದ ಶಾಲಾಕಾಲೇಜಿನ ವಿದ್ಯಾರ್ಥಿಗಳೇ ಹೆಚ್ಚಾಗಿ ಇದರ ಗ್ರಾಹಕರು. ಸಾರ್ವಜನಿಕ ಸಂಘಟನೆಗಳು ಈ ಕಂಪನಿಗಳ ವಿರುದ್ಧ ಪ್ರತಿಭಟನೆಯನ್ನು ನಡೆಸಿದವು. ಅವುಗಳನ್ನು ಈ ದೇಶದಿಂದಲೇ ಹೊರಹಾಕಬೇಕೆನ್ನುವ ಒತ್ತಾಯಗಳೂ ಕೇಳಿ ಬಂದವು.

ಈ ವಿಷಯವಾಗಿ ತನಿಖೆ ನಡೆಸಿ ಇವುಗಳಲ್ಲಿರುವ ಕೀಟನಾಶಕಗಳ ಪ್ರಮಾಣ ಆಹಾರ ಕಲಬೆರಕೆ ನಿಷೇಧ ನಿಯಮಾವಳಿ ನಿಗದಿಪಡಿಸಿರುವ ಸುರಕ್ಷಾ ಕ್ರಮಗಳ ಮಿತಿಯಲ್ಲಿದೆ ಎಂಬ ಸರ್ಕಾರಿ ಪ್ರಯೋಗಾಲಯದ ಫಲಿತಾಂಶ ಖಾಸಗಿ ಸಂಸ್ಥೆಯ ಫಲಿತಾಂಶಕ್ಕೆ ವಿರುದ್ಧವಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಏನೇ ಆಗಲಿ, ಸರ್ಕಾರ ಇನ್ನೊಮ್ಮೆ ಸರಿಯಾಗಿ ತನಿಖೆ ನಡೆಸಿ ತಪ್ಪಿತಸ್ಥ ಬಹುರಾಷ್ಟ್ರೀಯ ಕಂಪನಿಗಳಷ್ಟೇ ಅಲ್ಲ, ದೇಶೀಯ ಕಂಪನಿಗಳ ವಿರುದ್ಧವೂ ಕಠಿಣ ಕ್ರಮವನ್ನು ಜರುಗಿಸಬೇಕು.

***ಪ್ರಶ್ನೆಗಳು :***

(ಅ) ಸಾರ್ವಜನಿಕರು ಸಿ.ಎಸ್.ಇ. ಸಂಸ್ಥೆಯ ಯಾವ ಹೇಳಿಕೆಯಿಂದ ಆತಂಕಗೊಂಡಿದ್ದಾರೆ ? 2

(ಆ) ಸಾರ್ವಜನಿಕ ಸಂಘಟನೆಗಳು ಪೆಪ್ಸಿ ಮತ್ತು ಕೋಕಕೋಲ ಕಂಪನಿಗಳ ವಿರುದ್ಧ ಯಾವ ರೀತಿ ಆಕ್ರೋಶವನ್ನು ವ್ಯಕ್ತಪಡಿಸಿದವು ? 2

(ಇ) ಜನತೆಯ ಆರೋಗ್ಯವನ್ನು ಕಾಪಾಡುವಲ್ಲಿ ಸರ್ಕಾರದ ಪಾತ್ರವೇನು ? 2

(ಈ) 'ವಿಪರ್ಯಾಸ' - ಈ ಪದವನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ. 1

(ಉ) 'ಆತಂಕ' - ಈ ಪದದ ವಿರುದ್ಧಾರ್ಥಕ ಪದವನ್ನು ಬರೆಯಿರಿ. 1

## ವಿಭಾಗ 2 (ಪಠ್ಯಪುಸ್ತಕ)

**VII** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೇ ವಾಕ್ಯದಲ್ಲಿ ಉತ್ತರಿಸಿ : 12×1=12

14. ಭಾಷೆ ಯಾವುದಕ್ಕೆ ಸಾಧನವಾಗಿದೆ ?
15. ನಗೆಯ ಮುಖ್ಯ ಪ್ರಕಾರಗಳು ಯಾವುವು ?
16. ಬುದ್ಧನು ಯಾರನ್ನು ಅರಸುತ್ತಾ ಬಂದನು ?
17. ಶಾಲೆಯಲ್ಲಿ ದಾಖಲಿಸದ ಮಕ್ಕಳು ಯಾರವು ?
18. ಅಂದು ಮಹಾರಾಜಾ ಕಾಲೇಜಿನ ಅಧ್ಯಾಪಕರು ಹೇಗೆ ಕಾರ್ಯವನ್ನು ನಿರ್ವಹಿಸುತ್ತಿದ್ದರು ?
19. ಮೈಸೂರು ಕಾಂಗ್ರೆಸ್ ಅರಣ್ಯ ಸತ್ಯಾಗ್ರಹವನ್ನು ಯಾವಾಗ ಆರಂಭಿಸಿತು ?
20. ಹಿಮಾಚಲ ಯಾವುದರಿಂದ ಕೂಡಿದೆ ?
21. ಜನ್ಮ ಸಾರ್ಥಕವಾಗುವುದು ಯಾವಾಗ ?
22. ಮರ್ತ್ಯಾವಳಿಗೆ ಮಾತೆ ಯಾರು ?
23. ತೌರಿಗೆ ಹೋಗಲು ಎಷ್ಟು ಹೊತ್ತು ಬೇಕು ?
24. ಪ್ರಕೃತಿಯಲ್ಲಿ ಒಂದೇ ಆಗಿರುವ ಅಂಶಗಳು ಯಾವುವು ?
25. ಪಂಪನ ಕೃತಿಗಳಾವುವು ?

**VIII** ಈ ಪ್ರಶ್ನೆಗಳಿಗೆ 2 – 3 ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : 5×2=10

26. ಕವಿ ಯಾರು ಯಾರನ್ನು ಭಾರತವೆಂಬ ಬೋಧಿವೃಕ್ಷದ ಕೊಂಬೆಗಳೆಂದು ವರ್ಣಿಸಿದ್ದಾನೆ ?
27. ನಗುನಗುತ ಬಾಳಲು ಏನು ಮಾಡಬೇಕು ?
28. ಯಾರಲ್ಲಿ ಶೌರ್ಯವನ್ನು ತೋರಿಸು ಎಂದು ಅರ್ಜುನನು ಶಬರನಿಗೆ ಹೇಳಿದನು ?
29. ಮನಸ್ಸೆಂಬ ಯಂತ್ರವನ್ನು ಹಾಳುಮಾಡುವ ಸಂಗತಿಗಳಾವುವು ?
30. ಗೌರಿ ಸಿದ್ದಪ್ಪನನ್ನು ನಾಗರ ಹಾವಿನಿಂದ ಹೇಗೆ ರಕ್ಷಿಸಿದಳು ?

**IX** ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : 6×3=18

31. ಪಶುಲೋಮನು ಇಂದ್ರಾದಿ ದೇವತೆಗಳನ್ನು ಏನೆಂದು ಬೇಡಿಕೊಂಡನು ?
32. ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು ? ವಿವರಿಸಿ.

33. ಸಂದರ್ಭದೊಂದಿಗೆ ವಿವರಿಸಿ :

"ಸ್ವಾಮಿ, ಅವು ನನ್ನ ಮಕ್ಕಳು !"

**ಅಥವಾ**

"ನನ್ನ ಭಯವಾಳದಿಹ ನೆಲವುಂಟೆ ಓ ಭಿಕ್ಷು ?"

34. ದುರ್ಯೋಧನನು ತೊಡೆಮುರಿದು ಬಿದ್ದ ರೀತಿಯನ್ನು ವಿವರಿಸಿ.

35. ಸಂದರ್ಭದೊಂದಿಗೆ ವಿವರಿಸಿ :

"ಮಣ್ಣೆ ಲೋಕದಲಿ ಬೆಲೆಯಾದ್ದು."

**ಅಥವಾ**

"ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ ?"

36. ಪ್ರಜಾಮಾತೆಯ ವೈಶಿಷ್ಟ್ಯವೇನು ?

**X** ಕೆಳಗಿನ ಪ್ರಶ್ನೆಗಳಿಗೆ 8 – 10 ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : 5×2=10

37. ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆಯನ್ನು ವಿವರಿಸಿ.

**ಅಥವಾ**

ಮೊಲವು ಸಿಂಹವನ್ನು ಕೊಂದ ಬಗೆಯನ್ನು ವಿವರಿಸಿ.

38. ಪಾಂಡವರು ಸರೋವರದ ಬಳಿಗೆ ಬರಲು ಕಾರಣವಾದ ಪ್ರಸಂಗವನ್ನು ವಿವರಿಸಿ.

**ಅಥವಾ**

ಪಂಪನು ಬನವಾಸಿ ದೇಶವನ್ನು ಹೇಗೆ ವರ್ಣಿಸಿದ್ದಾನೆ ?